



# ‘ಕನ್ನಡ ದೀವಟಿಗೆ’ ಎಲ್.ಎಸ್.ಎಸ್.



**ವಿದ್ವತ್ತು ಹಾಗೂ ವಿವೇಕಗಳೊಂದಿಗೆ ವಿನಯವೂ ಬೆರೆತ ಅಪರೂಪದ ಉದಾಹರಣೆ ಎಲ್.ಎಸ್. ಶೇಷಗಿರಿ ರಾವ್ (ಫೆ. 16, 1925 – ಡಿ. 20, 2019). ವಿಮರ್ಶೆ, ಅನುವಾದ, ಬೋಧನೆ, ಸೃಜನಶೀಲ ಬರವಣಿಗೆ, ಸಂಘಟನೆ–ಸಂಪಾದನೆ ಹೀಗೆ ಹಲವು ರೀತಿಗಳಲ್ಲಿ ಸಕ್ರಿಯರಾಗುವ ಮೂಲಕ ಕನ್ನಡದ ಸಾಂಸ್ಕೃತಿಕ ಜಗತ್ತನ್ನು ತಮ್ಮ ಬದುಕಿನುದ್ದಕ್ಕೂ ಶ್ರೀಮಂತಗೊಳಿಸಿದ ಕೀರ್ತಿ ಅವರದು. ಅವರ ಕ್ರಿಯಾಶೀಲ ಬದುಕಿನ ಮತ್ತೊಂದು ಚಾಚು ‘ಕನ್ನಡ ಚಳವಳಿ’. ಈ ಚಳವಳಿಯ ಭಾಗವಾದ ಹಾಗೂ ಚಳವಳಿಯ ಇತಿಹಾಸದ ದಾಖಲಾತಿಯಾದ ‘ಕನ್ನಡ ಡಿಂಡಿಮ’ ಎನ್ನುವ ವಿಶಿಷ್ಟ ಕೃತಿಯ ಲೇಖಕ ರಾ.ನಂ. ಚಂದ್ರಶೇಖರ್ ಅವರು ತಾವು ಕಂಡ ‘ಪ್ರಿಯ ಕನ್ನಡಬಂಧು’ವಿನ ಚಿತ್ರಣ ಕಟ್ಟಿಕೊಟ್ಟಿದ್ದಾರೆ. ಎಲ್.ಎಸ್.ಎಸ್. ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಲೇ ಅವರ ಕನ್ನಡ ಪ್ರೇಮದ ಮಾದರಿಯನ್ನು ನಮ್ಮದಾಗಿಸಿಕೊಳ್ಳಬೇಕಾಗಿದೆ.**

**■ ರಾ.ನಂ. ಚಂದ್ರಶೇಖರ**

‘ಕನ್ನಡದ ಕಣ್ವ’ ಎಂದು ಗುರುತಿಸುವ ಬಿ.ಎಂ. ಶ್ರೀಕಂಠಯ್ಯ ಅವರ ನೇರ ವಿದ್ಯಾರ್ಥಿ ಹಾಗೂ ‘ಕನ್ನಡ ಚಳವಳಿ’ ಚಾಲಕ ಶಕ್ತಿ ಅ.ನ.ಕೃ. ಅವರ ಆಪ್ತವಲಯಕ್ಕೆ ಸೇರಿದ್ದವರು ಎಲ್.ಎಸ್. ಶೇಷಗಿರಿ ರಾವ್. ಆ ಈರ್ವರ ಕನ್ನಡ ಜಾಗೃತಿಯ ಮಾದರಿಯನ್ನು ಮೇಳೈಸಿಕೊಂಡು ಕನ್ನಡತನವನ್ನು ಬದುಕಿನ ಭಾಗವಾಗಿ ಸ್ವೀಕರಿಸಿದವರು. 1947ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಭಾಗಿಯಾಗಿ ಅದರೊಂದಿಗೆ ಕನ್ನಡ ಹೋರಾಟದ ಭಾಗವಾದರು. ಅಂದಿನಿಂದ ತಮ್ಮ 90ರ ಹರಯದವರೆಗೂ ಕನ್ನಡಪರ ಹೋರಾಟದ ಭಾಗವಾಗಿದ್ದರು.

‘ಬೀದಿಗಿಳಿದ ಸಾಹಿತಿ, ಚಲಿಸುವ ಜ್ವಾಲಾಮುಖಿ’, ‘ಕರ್ನಾಟಕದಲ್ಲಿ ಕನ್ನಡವೇ ಪ್ರಥಮ ಭಾಷೆ’ ಎಂಬಂತಹ ಫಲಕಗಳನ್ನು ಹಿಡಿದು ಮೂರು ತಲೆಮಾರಿನ ಐವತ್ತಕ್ಕೂ ಹೆಚ್ಚು ಗಣ್ಯ ಸಾಹಿತಿಗಳು ‘ಗೋಕಾಕ್ ಭಾಷಾಸೂತ್ರ’ದ ಅನುಷ್ಠಾನಕ್ಕೆ ಒತ್ತಾಯಿಸಿ 1982ರ ಏಪ್ರಿಲ್ 13ರಂದು ಬೆಂಗಳೂರಿನ ಸೆಂಟ್ರಲ್ ಕಾಲೇಜು ಆವರಣದಿಂದ ವಿಧಾನಸೌಧದವರೆಗೆ ಮೆರವಣಿಗೆ ನಡೆಸಿದರು. ಆ ಮೆರವಣಿಗೆಯಲ್ಲಿ ಎಲ್. ಎಸ್. ಶೇಷಗಿರಿರಾವ್ ಅವರೂ ಇದ್ದರು. ಆ ಚಳವಳಿ ಮುಂದೆ ‘ಗೋಕಾಕ್ ಚಳವಳಿ’ ಎಂದು ಜನಜನಿತವಾಗಿ ಕನ್ನಡಪರ ಕೆಲಸಗಳಿಗೆ ಉತ್ಸಾಹ ಬಂದದ್ದು, ಎಲ್ಲ ವರ್ಗದ ಕನ್ನಡಿಗರೂ ಸ್ಪಂದಿಸಿದ್ದು ಈಗ ಇತಿಹಾಸ. ಇಂದಿಗೂ ಕನ್ನಡ ಸಮಸ್ಯೆ ಬಂದಾಗ ‘ಗೋಕಾಕ್ ಚಳವಳಿ’ ಮಾದರಿಯ ಹೋರಾಟದ ಮಾತು ಕೇಳಿಬರುತ್ತದೆ.

ಗೋಕಾಕ್ ಭಾಷಾ ಸೂತ್ರದ ಅನುಷ್ಠಾನಕ್ಕೆ ಆಗ್ರಹಿಸಿ ನಡೆಯುತ್ತಿದ್ದ ಚಳವಳಿಯನ್ನು ವಿರೋಧಿಸಿ ‘ಸಮೂಹಸನ್ನಿ’, ಕನ್ನಡ ಚಳವಳಿ ಫ್ಯಾಸಿಸ್ಟ್ ಸ್ವರೂಪದ್ದೂ ಎಂದು ಗಣ್ಯ ಸಾಹಿತಿಯೊಬ್ಬರು ಲೇಖನ ಬರೆದರು (ಈ ಲೇಖನ ಬರೆದವರೂ ಕನ್ನಡದಹಿತ ಬಯಸಿದವರೇ, ಆದರೆ, ಗೋಕಾಕ್ ಚಳವಳಿ ವಿರೋಧಿಸಿ ಕನ್ನಡ ಕಾರ್ಯಕರ್ತರ ಕೆಂಗಣ್ಣಿಗೆ ಗುರಿಯಾದರು). ಆ ಲೇಖನ ಕನ್ನಡಿಗರಲ್ಲಿ ಗೊಂದಲ ಸೃಷ್ಟಿಸುತ್ತದೆ ಅನ್ನುವ ಮಾತು ಕೇಳಿಬಂದವು. ಆಗ ಎಲ್ಎಸ್ಎಸ್ ಈ ಲೇಖನಕ್ಕೆ ಸ್ಪಷ್ಟ ಉತ್ತರ ನೀಡಿ ಲೇಖನ ಬರೆದರು. ಇದು ಹೋರಾಟದ ಬಗ್ಗೆ ಒಡಕು ಮಾತನಾಡುತ್ತಿದ್ದವರಿಗೆ ಉತ್ತರವಾಗಿ, ಚಳವಳಿ ಹೆಚ್ಚು ಗಟ್ಟಿಯಾಗಲು ನೆರವಾಯಿತು.

### ಪಂಜಿನ ಮೆರವಣಿಗೆಯಲ್ಲಿ ಸಂಭ್ರಮಿಸಿದ್ದರು

ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಎಂ. ಚಿದಾನಂದಮೂರ್ತಿಯವರ ನೇತೃತ್ವದಲ್ಲಿ ರೂಪುಗೊಂಡ ‘ಸಾಹಿತಿಗಳ ಕಲಾವಿದರ ಬಳಗ’ ನಂತರವೂ ಕ್ರಿಯಾಶೀಲವಾಗಿ ಕನ್ನಡ ಚಳವಳಿಯಲ್ಲಿ ತೊಡಗಿಕೊಳ್ಳುವಲ್ಲಿ ಎಲ್ಎಸ್ಎಸ್ ಅವರ ಪಾತ್ರ ಮಹತ್ವದ್ದು. ಅನಂತರದ ದಿನಗಳಲ್ಲಿ ಬಳಗವು ಹಮ್ಮಿಕೊಂಡ ಎಲ್ಲ ಹೋರಾಟಗಳಲ್ಲಿ – ಅದು ಕನ್ನಡಿಗರ ಉದ್ಯೋಗದ ವಿಷಯವಿರಲಿ (ಮಹಿಷಿ ವರದಿ), ಕನ್ನಡ ದೂರದರ್ಶನಕ್ಕೆ ಆಗ್ರಹಿಸಿ ನಡೆದ ಹೋರಾಟ ಇರಲಿ, ಕಾವೇರಿ ವಿವಾದ ಸಂದರ್ಭದಲ್ಲಿ ನಡೆದ ಪಂಜಿನ ಮೆರವಣಿಗೆಯಿರಲಿ, ಗಡಿ ವಿವಾದ, ಶಾಸ್ತ್ರೀಯ ಭಾಷೆ... ಹೀಗೆ ಕನ್ನಡ ಹಿತ ಕಾಪಾಡಲು ನಡೆದ ಧರಣಿ, ಮೆರವಣಿಗೆ, ಪ್ರದರ್ಶನಗಳಲ್ಲಿ ಮಡಿವಂತಿಕೆ ತೋರದೆ ನಿಸ್ಸಂಕೋಚವಾಗಿ ಪಾಲ್ಗೊಳ್ಳುತ್ತಿದ್ದರು. ಕಾವೇರಿ ಜಲವಿವಾದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಬೃಹತ್ ಪಂಜಿನ ಮೆರವಣಿಗೆ ನಡೆಯಿತು. ಅಂದು ರಾಯರು ಮುಂದೆ ನಿಂತು ಪಂಜು ಹಿಡಿದು ಕೊನೆಯವರೆಗೂ ನಡೆದದ್ದು ಈಗಲೂ ನನ್ನ ಕಣ್ಣುಮುಂದೆ ಬರುತ್ತದೆ. ಹಾಗೇ ಕೊಡಗಿನಲ್ಲಿ ಪ್ರತ್ಯೇಕತೆ ಕೂಗು ಕೇಳಿಬಂದಾಗ, ತಮ್ಮ 80ನೆಯ ವಯಸ್ಸಿನಲ್ಲಿಯೂ ನೇರವಾಗಿ ಅಲ್ಲಿಗೇ ಹೋಗಿ ಪ್ರತ್ಯೇಕತೆ ವಿರುದ್ಧ ಧ್ವನಿ ಎತ್ತಿದರು (ಇವರು ಮಡಿಕೇರಿಯಲ್ಲಿ ಪ್ರಾಧ್ಯಾಪಕರಾಗಿದ್ದರು). ಪರಿಚಿತರ ಬೆಂಬಲ ದೊರಕಿಸಿಕೊಟ್ಟರು.

ರಾಯರು ‘ಸಾಹಿತಿಗಳ ಕಲಾವಿದರ ಬಳಗ’, ‘ಕನ್ನಡ ಶಕ್ತಿ ಕೇಂದ್ರ’, ‘ಕನ್ನಡ ಗೆಳೆಯರ ಬಳಗ’ದ ಪ್ರಮುಖರಾಗಿದ್ದರು, ನಿಜ. ಆದರೆ, ಬೇರೆ ಕನ್ನಡ ಸಂಘಟನೆಗಳೊಡನೆಯೂ ಕೈಜೋಡಿಸುತ್ತಿದ್ದರು. ವ್ಯಾಪಕವಾಗಿ ಕ್ರಿಯಾಶೀಲರಾಗಿದ್ದ ಎಲ್ಎಸ್ಎಸ್ ಅವರು ಪಾಲ್ಗೊಂಡ ಎಲ್ಲ ಕನ್ನಡ ಕೆಲಸಗಳನ್ನು ಪಟ್ಟಿಮಾಡುವುದು ಕಷ್ಟ. ಇಲ್ಲಿ ಪ್ರಾತಿನಿಧಿಕವಾಗಿ ಒಂದೆರಡು ಸಂಗತಿಗಳ ವಿವರ ನೀಡಿದ್ದೇನೆ.

### ಕನ್ನಡ ಉಳಿಸಿ ವರ್ಷ

‘ಕನ್ನಡ–ಕನ್ನಡಿಗ–ಕರ್ನಾಟಕ’ಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಿ